ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 6, January - February 2025, Pp. 82-85
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಕರ್ನಾಟಕದ ಚುನಾವಣಾ ವ್ಯವಸ್ಥೆಯ ಒಂದು ಅವಲೋಕನ

**ಡಾ. ತಿಪ್ಪೇಸ್ವಾಮಿ ಎನ್.ಬಿ**

ಅತಿಥಿ ಉಪನ್ಯಾಸಕರು, ಸಮಾಜಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಂಡೂರು ಬಳ್ಳಾರಿ ಜಿಲ್ಲೆ

***Abstract:***

*ಕರ್ನಾಟಕದ ಚುನಾವಣಾ ವ್ಯವಸ್ಥೆಯು ವಿಶಾಲವಾದ ವ್ಯಾಪ್ತಿಯನ್ನು ಹೊಂದಿದ್ದು, ಇದು ಲೋಕಸಭೆ, ವಿಧನಾಸಭೆ, ವಿಧಾನ ಪರಿಷತ್ತು ಹಾಗೂ ಇತರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ಸೇರಿದಂತೆ ವಿವಿಧ ಹಂತದ ಚುನಾವಣಾ ವ್ಯವಸ್ಥೆಯನ್ನು ಹೊಂದಿದೆ. ಈ ವ್ಯವಸ್ಥೆಯು ಸಾಂವಿಧಾನಿಕ ನಿಬಂಧನೆಗಳಿಂದ ನಿರ್ವಹಿಸಲುಪಡುತ್ತದೆ. ಹಾಗೂ ಭಾರತೀಯ ಚುನವಣಾ ಆಯೋಗ ಮತ್ತು ಕರ್ನಾಟಕ ಚುನಾವಣಾ ಆಯೋಗದಿಂದ ನಿರ್ವಹಿಸಲ್ಪಡುತ್ತದೆ, ಮುಕ್ತವಾದ ಮತ್ತು ನ್ಯಾಯಯುತವಾದ ಚುನಾವಣೆಗಳನ್ನು ನಡೆಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ರಾಜ್ಯದ ಚುನಾವಣಾ ಫಲಿತಾಂಶಗಳು ಜಾತಿ, ಧರ್ಮ ಮತ್ತು ನಗರ–ಗ್ರಾಮೀಣ ವಿಭಜನೆಗಳು ಸೇರಿದಂತೆ ಮತದಾರರ ಜನಸಂಖ್ಯಾಶಾಸ್ತ್ರದಿಂದ ಗಮನಾರ್ಹವಾಗಿ ಪ್ರಭಾವಿತವಾಗಿವೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಲೇಖನದಲ್ಲಿ ಕರ್ನಾಟಕ ಚುನಾವಣಾ ವ್ಯವಸ್ಥೆಯನ್ನು ಕುರಿತು ಚರ್ಚಿಸಲಾಗಿದೆ.*

**Keywords:** *ಕರ್ನಾಟಕದ ಚುನಾವಣೆ, ರಾಜಕೀಯ ಪಕ್ಷಗಳು, ಜಾತಿ ಮತ್ತು ಧರ್ಮದ ಪಾತ್ರ.*

## ಪೀಠಿಕೆ

ಕರ್ನಾಟಕ ರಾಜ್ಯವು ಪ್ರಜಾಪ್ರಭುತ್ವ ವ್ಯವಸ್ಥೆಯ ಶಾಸನಗಳ ಪ್ರಕಾರ ಚುನಾವಣೆಗಳನ್ನು ನಡೆಸುತ್ತದೆ. ರಾಜ್ಯವು ಕರ್ನಾಟಕ ವಿಧಾನಸಭೆ ಮತ್ತು ಕರ್ನಾಟಕ ವಿಧಾನ ಪರಿಷತ್‌ಗಳನ್ನು ಒಳಗೊಂಡ ದ್ವಿಸದನ ಶಾಸಕಾಂಗಗಳನ್ನು ಒಳಗೊಂಡಿದೆ. ರಾಜ್ಯ ವಿಧಾನಸಭೆಯು 224 ಸದಸ್ಯರನ್ನು ಒಳಗೊಂಡಿದೆ, ಪ್ರತಿಯೊಬ್ಬರೂ ಮತದಾನ ಚುನಾವಣಾ ವ್ಯವಸ್ಥೆಯ ಮೂಲಕ ಆಯ್ಕೆಯಾಗುತ್ತಾರೆ. ವಿಧಾನಸಭೆಗೆ ಪ್ರತಿ 5 ವರ್ಷಗಳಿಗೊಮ್ಮೆ ಚುನಾವಣೆಗಳು ನಡೆಯುತ್ತವೆ. ಕರ್ನಾಟಕದಲ್ಲಿ ಚುನಾವಣಾ ಪ್ರಕ್ರಿಯೆಯು ಹಲವಾರು ಪ್ರಮುಖ ಹಂತಗಳನ್ನು ಒಳಗೊಂಡಿದೆ. ಲೋಕಸಭೆಯಲ್ಲಿ ಕರ್ನಾಟಕವನ್ನು ಪ್ರತಿನಿಧಿಸಲು ಪಾರ್ಲಿಮೆಂಟ್ ಸದಸ್ಯರನ್ನು ಆಯ್ಕೆ ಮಾಡಲು ಪ್ರಜಾಪ್ರಭುತ್ವದ ಅಡಿಯಲ್ಲಿ ಚುನಾವಣೆಗಳನ್ನು ನಡೆಸಲಾಗುತ್ತದೆ, ಆದರೆ ರಾಜ್ಯ ಶಾಸಕಾಂಗ ಚುನಾವಣೆಗಳು ವಿಧಾನಸಭೆಯ ಸಂಯೋಜನೆಯನ್ನು ನಿರ್ಧರಿಸುತ್ತವೆ. ಸ್ಥಳೀಯ ಸಂಸ್ಥೆಗಳಾದ ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಯ ಚುನಾವಣೆಗಳು ಸಹ ನಿರ್ಧರಿತವಾಗಿರುತ್ತವೆ. ಈ ಚುನಾವಣೆಗಳಲ್ಲಿ ಸೂಕ್ತ ಪ್ರತಿನಿಧಿಗಳ ಪಾತ್ರ ಪ್ರಮುಖವಾಗಿರುತ್ತದೆ. ಕರ್ನಾಟಕ ರಾಜ್ಯ ಚುನಾವಣಾ ಆಯೋಗವು ಈ ಸ್ಥಳೀಯ ಚುನಾವಣೆಗಳ ಮೇಲ್ವಿಚಾರಣೆ ನಡೆಸುವುದರ ಜೊತೆಗೆ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು, ಉಪವಿಭಾಗಧಿಕಾರಿಗಳು ಹಾಗೂ ತಾಲೂಕು

***Please cite this article as:*** ತಿಪ್ಪೇಸ್ವಾಮಿ ಎನ್.ಬಿ. (2025). ಕರ್ನಾಟಕದ ಚುನಾವಣಾ ವ್ಯವಸ್ಥೆಯ ಒಂದು ಅವಲೋಕನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(6), 82–85

ದಂಡಧಿಕಾರಿಗಳು ಇತರೆ ಸರ್ಕಾರಿ ಅಧಿಕಾರಿಗಳು ಚುನಾವಣಾ ಕಾರ್ಯವನ್ನು ನಿಭಾಯಿಸುತ್ತಾರೆ.

**ಕರ್ನಾಟಕ ರಾಜಕೀಯ ಪಕ್ಷಗಳು**

ಕರ್ನಾಟಕದ ರಾಜ್ಯದಲ್ಲಿ ಹಲವಾರು ರಾಜಕೀಯ ಪಕ್ಷಗಳು ಚುನಾವಣೆಯಲ್ಲಿ ಸಕ್ರಿಯ ಭಾಗವಹಿಸುವಿಕೆಯನ್ನು ಹೊಂದಿವೆ. ಕರ್ನಾಟಕದ ಜನರ ಮತವನ್ನು ಆಕರ್ಷಿಸಲು ವಿಭಿನ್ನ ಚುನಾವಣಾ ತಂತ್ರಗಳನ್ನು ಬಳಸುತ್ತಿವೆ. ಆ ರೀತಿ ಪ್ರಮುಖ ಪಕ್ಷಗಳೆಂದರೆ ಕಾಂಗ್ರೆಸ್ ಪಕ್ಷ, ಭಾರತೀಯ ಜನತಾ ಪಕ್ಷ (ಬಿಜೆಪಿ), ಬಿಎಸ್‌ಪಿ, ಸಮಾಜವಾದಿ ಪಕ್ಷ, ಎಎಪಿ ಮತ್ತು ಪ್ರಾದೇಶಿಕ ಪಕ್ಷಗಳಾದ ಜನತಾದಳ (ಜಾತ್ಯತೀತ ಜೆಡಿಎಸ್), ಕೆಜೆಪಿ ಈ ಎಲ್ಲವೂ ಕರ್ನಾಟಕ ರಾಜ್ಯದ ರಾಜಕೀಯ ಚಲನಶೀಲತೆಯನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸಿವೆ. ಈ ಅವಲೋಕನವು ಈ ಪಕ್ಷಗಳ ಇತಿಹಾಸ ಮತ್ತು ಚುನಾವಣಾ ಕಾರ್ಯತಂತ್ರದ ಪ್ರಣಾಳಿಕೆಗಳು ಹಾಗೂ ಪಕ್ಷದ ನಾಯಕರುಗಳು ಮತ್ತು ಕಾರ್ಯಕರ್ತರು ಪ್ರಚಾರವನ್ನು ಮುನ್ನಡೆಸುವ ಪ್ರಮುಖ ವಿಷಯಗಳು ಮತ್ತು ಕರ್ನಾಟಕದ ರಾಜಕೀಯ ವಾತಾವರಣದ ವಿಶಾಲ ಪರಿಣಾಮಗಳನ್ನು ಒಳಗೊಂಡಿದೆ.

**ಕರ್ನಾಟಕದ ಚುನಾವಣೆಯಲ್ಲಿ ಜಾತಿ ಮತ್ತು ಧರ್ಮ ಪಾತ್ರ**

ಕರ್ನಾಟಕ ರಾಜ್ಯದ ಚುನಾವಣಾ ರಾಜಕೀಯವು ಜಾತಿ ಮತ್ತು ಧರ್ಮಗಳಿಂದ ಹೆಚ್ಚು ಪ್ರಭಾವಿತವಾಗಿದೆ. ಜಾತಿ ವ್ಯವಸ್ಥೆಯು ಹುಟ್ಟಿನಿಂದ ಆವರಿಸಿದ ಅಂತಸ್ತಾಗಿದ್ದು ಸಂಖ್ಯಾತ್ಮಕವಾಗಿ ಪ್ರಬಲ ಜನಸಂಖ್ಯೆಯನ್ನು ಹೊಂದಿದ್ದು ಪ್ರಬಲ ಜಾತಿಗಳ ಅಭ್ಯರ್ಥಿಗಳು ಚುನಾವಣೆಯಲ್ಲಿ ಹೆಚ್ಚು ಪ್ರಬಲ ಸ್ಪರ್ಧಿಗಳಾಗಿ ಭಾಗವಹಿಸುವಿಕೆಯೊಂದಿಗೆ ಜಯಶಾಲಿಗಳಾಗುತ್ತಾರೆ.

**ಜಾತಿಯಾಧಾರಿತ ಮತದಾನ**

ಜಾತಿ ಆಧಾರಿತ ಮತದಾನದ ಮಾದರಿಗಳು ಕರ್ನಾಟಕದ ಚುನಾವಣೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಲಿಂಗಾಯತ ಮತ್ತು ಒಕ್ಕಲಿಗ ಸಮುದಾಯಗಳು ವಿಶೇಷವಾಗಿ ಪ್ರಬಲ ಜಾತಿಗಳಾಗಿದ್ದು, ಲಿಂಗಾಯತರು ಸರಿಸುಮಾರು ಶೇಕಡ 17ರಷ್ಟು ಮತ್ತು ಒಕ್ಕಲಿಗ ಸಮುದಾಯದವರು ಸುಮಾರು ಶೇಕಡ 12ರಷ್ಟು ಮತದಾರರಾಗಿದ್ದಾರೆ. ಈ ಎರಡು ಸಮುದಾಯಗಳು ವಿವಿಧ ರಾಜಕೀಯ ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಂಡಿವೆ. ಲಿಂಗಾಯತರು ಹೆಚ್ಚಾಗಿ ಭಾರತೀಯ ಜನತಾ ಪಕ್ಷವನ್ನು (ಬಿಜೆಪಿ) ಬೆಂಬಲಿಸಿದ್ದಾರೆ, ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಅವರ ನಾಯಕತ್ವದಲ್ಲಿ ಬಲಿಷ್ಠವಾಗಿರುವುದು ಕಂಡುಬರುತ್ತದೆ. ಆದರೆ ಒಕ್ಕಲಿಗರು ಜನತಾದಳ (ಜಾತ್ಯತೀತ ಜೆಡಿಎಸ್) ಮತ್ತು ಕೆಲವೊಮ್ಮೆ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಲು ಆಸಕ್ತಿ ತೋರಿದ್ದಾರೆ. ಹಾಗೆಯೇ 2023 ರ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಸಾಮಾಜಿಕ ಸ್ಥರವ್ಯವಸ್ಥೆಯಲ್ಲಿ ಲಿಂಗಾಯತ ಸಮುದಾಯದೊಳಗಿನ ಕೆಲವು ಉಪಜಾತಿಗಳು ಕಾಂಗ್ರೆಸ್‌ಗೆ ತಮ್ಮ ಬೆಂಬಲವನ್ನು ನೀಡುವುದರಿಂದ ರಾಜಕೀಯ ಸಂಚಲನೆ ಉಂಟಾಗಿದೆ. ಇತರ ಸ್ಥಳೀಯ ಸಂಸ್ಥೆಗಳಾದ ಗ್ರಾಮ ಪಂಚಾಯಿತಿ ಮತ್ತು ತಾಲೂಕು ಪಂಚಾಯಿತಿ, ಪಟ್ಟಣ ಪಂಚಾಯಿತಿಗಳು ಮತ್ತು ಜಿಲ್ಲಾ ಪಂಚಾಯಿಗಳಲ್ಲಿ ಜಾತಿವಾರು ಇತರ ಪ್ರಬಲ ಜಾತಿಗಳಾದ ಲಂಬಾಣಿ, ನಾಯಕ, ಭೋವಿ ಇತರೆ ಜಾತಿಯವರು ಚುನಾವಣೆಯಲ್ಲಿನ ಗೆಲುವನ್ನು ಸಾಧಿಸುತ್ತವೆ. ಜಾತಿಯಾಧಾರಿತ ಸಂಘಟನೆಗಳು ಮತದಾರರನ್ನು ಸಿದ್ಧಪಡಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಈ ಅಂಶಗಳು ಚುನಾವಣಾ ಫಲಿತಾಂಶಗಳ ಮೇಲೆ ಪ್ರಭಾವ ಬೀರುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಈ ಸಂಸ್ಥೆಗಳು ಆಗಾಗ್ಗೆ ಆಯಾ ಜಾತಿ ಸಮುದಾಯಗಳ ಅಭ್ಯರ್ಥಿಗಳನ್ನು ಉತ್ತೇಜಿಸುತ್ತವೆ.

**ಧರ್ಮಗಳ ಪ್ರಭಾವ**

ಕರ್ನಾಟಕದ ರಾಜಕೀಯದ ಮೇಲೆ ಧರ್ಮಗಳ ಪ್ರಭಾವವು ಗಮನಾರ್ಹವಾಗಿ ಪರಿಣಾಮ ಬೀರುತ್ತದೆ,

ಹಿಂದುತ್ವ ಮತ್ತು ಮುಸ್ಲಿಂ ಮತದಾನದ ಮಾದರಿಗಳ ಅವಲೋಕನದಿಂದ ವಿವಿಧ ಸಮುದಾಯಗಳಲ್ಲಿ ಹಿಂದೂ ಧರ್ಮದ ಮತಗಳನ್ನು ಕ್ರೋಢೀಕರಿಸಲು ಬಿಜೆಪಿ ಹಿಂದುತ್ವ ಸಿದ್ಧಾಂತದ ನಿಲುವುಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡಿದೆ. ಚುನಾವಣೆಯ ನಡೆಯುವ ಸನ್ನಿವೇಶದಲ್ಲಿ ಮತೀಯ ಭಾವನೆಗಳನ್ನು ಕ್ರೋಢೀಕರಿಸಬಹುದಾದ ಪರಿಣಾಮಕಾರಿಯಾಗಿಸಿಕೊಂಡಿದೆ. ಮತೀಯ ಧ್ರುವೀಕರಣ ಮತ್ತು ಆಡಳಿತ ವೈಫಲ್ಯಗಳ ಆರೋಪಗಳು ಸಾಂಪ್ರದಾಯಿಕ ಬೆಂಬಲಿಗರಲ್ಲಿ ರಾಜಕೀಯ ಸಂಘರ್ಷಕ್ಕೆ ಕಾರಣವಾಗಿವೆ. ಕರ್ನಾಟಕದ ಮತದಾರರಲ್ಲಿ ಶೇಕಡ 9ರಷ್ಟಿರುವ ಮುಸ್ಲಿಂ ಮತದಾರರು ಐತಿಹಾಸಿಕವಾಗಿ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳತ್ತ ಸೆಳೆಯುತ್ತಿವೆ. ಮುಸ್ಲಿಮರಿಗೆ ಮೀಸಲಾತಿ ನೀತಿಗಳಂತಹ ವಿಷಯಗಳು ವಿವಾದಾತ್ಮಕವಾದ ಇತ್ತೀಚಿನ ಚುನಾವಣೆಗಳಲ್ಲಿ ಕಂಡುಬಂದಂತೆ, ಪ್ರಜೆಗಳನ್ನು ಕೋಮು ಆಧಾರದ ಮೇಲೆ ಧ್ರುವೀಕರಿಸುವ ಬಿಜೆಪಿಯ ಪ್ರಯತ್ನಗಳು ಆಗಾಗ್ಗೆ ಹಿನ್ನಡೆಯನ್ನುಂಟುಮಾಡುತ್ತವೆ. ಮುಸ್ಲಿಮರಿಗೆ ಶೇಕಡ 4 ಮೀಸಲಾತಿಯನ್ನು ರದ್ದುಗೊಳಿಸುವ ಮತ್ತು ಅದನ್ನು ಪ್ರಬಲ ಜಾತಿಗಳಿಗೆ ಹಂಚಿಕೆ ಮಾಡುವ ಬಿಜೆಪಿ ಪಕ್ಷದ ನಿಲುವುಗಳು ಮುಸ್ಲಿಂ ಸಮುದಾಯಗಳಿಂದ ಹಿನ್ನಡೆಯನ್ನು ಎದುರಿಸಿತು, ಧರ್ಮದ ಸಮಸ್ಯೆಗಳು ಮತದಾರರ ಭಾವನೆಯ ಮೇಲೆ ಹೇಗೆ ಗಮನಾರ್ಹವಾಗಿ ಪ್ರಭಾವ ಬೀರುವುದರ ಜೊತೆಗೆ ಜಾತಿ ಮತ್ತು ಧರ್ಮದ ನಡುವಿನ ಪರಸ್ಪರ ಕ್ರಿಯೆಯು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಮತ್ತಷ್ಟು ಬಲಗೊಳಿಸುತ್ತವೆ. 2023 ರ ಚುನಾವಣೆಯ ಅವಧಿಯಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಎರಡೂ ವಿವಿಧ ಜಾತಿ ಮತ್ತು ಧಾರ್ಮಿಕ, ಅಹಿಂದ ಗುಂಪುಗಳನ್ನು ಆಕರ್ಷಿಸುವ ಒಕ್ಕೂಟಗಳನ್ನು ರಚಿಸಲು ಪ್ರಯತ್ನಿಸಿದವು, 2023ರ ವಿಧಾನಸಭಾ ಸಾರ್ವತ್ರಿಕ ಚುನಾವಣೆಯ ಮತದಾನದ ಹಾಗೂ ಸ್ಪಧಿಸಿದ ಪಕ್ಷಗಳ ವಿವರವನ್ನು ಈ ಕೆಳಗಿನಂತೆ ನೋಡಬಹುದು.

**ಕೋಷ್ಟಕ 1: 2023ರ ವಿಧಾನಸಭಾ ಸಾರ್ವತ್ರಿಕ ಚುನಾವಣೆಯ ವಿವರಗಳು**

| ಕ್ರ.ಸಂ | **ಚುನಾವಣೆಗೆ ಸ್ಪರ್ಧಿಸಿದ ರಾಜಕೀಯ ಪಕ್ಷಗಳು** | **ಚುನಾವಣೆಯಲ್ಲಿ ಗೆಲುವು ಪಡೆದ ಸ್ಥಾನಗಳು** | **ಪಕ್ಷಗಳು ಪಡೆದ ಮತಗಳು** | **ಮತದಾನದ ಪ್ರಮಾಣ ಶೇಕಡಾವಾರು** |
|---|---|---|---|---|
| 1 | ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ | 135 | 1,67,89,305 | 42.88 |
| 2 | ಭಾರತೀಯ ಜನತಾ ಪಕ್ಷ | 66 | 1,40,96,604 | 36.00 |
| 3 | ಜನತಾದಳ (ಜೆಡಿಎಸ್) | 19 | 52,05,690 | 13.3 |
| 4 | ಕಲ್ಯಾಣ ರಾಜ್ಯ ಪ್ರಗತಿಪಕ್ಷ | 1 | 2,48,284 | 0.63 |
| 5 | ಸರ್ವೋದಯ ಕರ್ನಾಟಕ ಪಕ್ಷ | 1 | 95,978 | 0.25 |
| 6 | ಇತರೆ | 0 | 10,05,683 | 2.18 |
| 7 | ಸ್ವತಂತ್ರ | 2 | 15,93,517 | 2.18 |
| 8 | ನೋಟ (NOTA) | – | 2,69,764 | 0.69 |
| **ಒಟ್ಟು** | | **224** | **3,91,55,182** | **100.00** |

ಮೂಲ: https://www.eci.gov.in/statistical-reports

ಒಟ್ಟಾರೆಯಾಗಿ ಕರ್ನಾಟಕ ರಾಜ್ಯದ ರಾಜಕೀಯವು ಪ್ರಭಾವವನ್ನು ಲೆಕ್ಕಿಸದೆ ಸಮಾನವಾಗಿ ಹಾಗೂ ನ್ಯಾಯಸಮ್ಮತತೆಯನ್ನು ಉತ್ತೇಜಿಸಲು ನಿರ್ಣಾಯಕವಾಗಿರುವುದರ ಜೊತೆಗೆ ಕರ್ನಾಟಕವು ಚುನಾವಣಾ ಸುಧಾರಣೆಗಳಿಗೆ ತನ್ನ ರಾಜಕೀಯ ಅಸ್ಮಿತೆ ಮತ್ತು ಬದ್ಧತೆಯನ್ನು ಮುಂದುವರಿಸುತ್ತಿದೆ. ರಾಜಕೀಯ ತಾಂತ್ರಿಕ ಆವಿಷ್ಕಾರಗಳು ವ್ಯವಸ್ಥೆಯೊಳಗಿನ ಆಡಳಿತ್ಮಾಕ ಹಾಗೂ ರಚನಾತ್ಮಕ ಸಮಸ್ಯೆಗಳನ್ನು ನಿಭಾಯಿಸುವ ಮೂಲಕ ರಾಜಕೀಯ ಇಚ್ಛಾ ಶಕ್ತಿಯಿಂದ ಪೂರಕವಾಗಿರುವುದನ್ನು ಖಚಿತಪಡಿಸಿಕೊಳ್ಳುವುದರ ಮೂಲಕ ಅನೇಕ ಸವಾಲುಗಳನ್ನು ಎದುರಿಸುವ ಮೂಲಕ ಕರ್ನಾಟಕವು ತನ್ನ ಪ್ರಜಾಪ್ರಭುತ್ವ ಸಂಸ್ಥೆಗಳನ್ನು ಮತ್ತಷ್ಟು ಬಲಪಡಿಸುತ್ತಿರುವುದು ಅಧ್ಯಯನದಿಂದ ತಿಳಿದುಬಂದಿದೆ.

**ಪರಾಮರ್ಶನ ಗ್ರಂಥಗಳು**


- ಬಾನ್ ಮತ್ತು ವಿಜಯೇಂದ್ರ ರಾವ್. (2007). *ದಕ್ಷಿಣ ಭಾರತದಲ್ಲಿ ಜಾತಿಯ ರಾಜಕೀಯ ನಿರ್ಮಾಣ.* ವರ್ಲ್ಡ್ ಬ್ಯಾಂಕ್.
- ಕಿಟ್ಶೆಲ್ಟ್, ಹರ್ಬರ್ಟ್ (2000). ಪ್ರಜಾಸ್ತಾತ್ಮಕ ರಾಜಕಾರಣದಲ್ಲಿ ನಾಗರಿಕರು ಮತ್ತು ರಾಜಕಾರಣಿಗಳ ನಡುವಿನ ಸಂಪರ್ಕಗಳು. *ಕಂಪ್ಯಾರೇಟಿವ್ ಪೊಲಿಟಿಕಲ್ ಸ್ಟಡೀಸ್,* 33(6/7), 845–79.
- ಪಳನಿಸ್ವಾಮಿ, ಎನ್., ಮತ್ತು ಕೃಷ್ಣನ್, ಎನ್. (2012). ಸ್ಥಳೀಯ ರಾಜಕೀಯ, ರಾಜಕೀಯ ಸಂಸ್ಥೆಗಳು ಮತ್ತು ಸಾರ್ವಜನಿಕ ಸಂಪನ್ಮೂಲ ಹಂಚಿಕೆ. *ಎಕಾನಾಮಿಕ್ ಡೆವಲಪ್ಮೆಂಟ್ ಅಂಡ್ ಕಲ್ಚರಲ್‌ಚೇಂಜ್.* 60, 449–473.
- ಶ್ರೀನಿವಾಸ್, ಎಂ.ಎನ್. (1955). *ಮೈಸೂರಿನ ಒಂದು ಗ್ರಾಮದ ಜೀವನದ ಸಾಮಾಜಿಕ ರಚನೆ.* ***ಈ ಗ್ರಂಥದಲ್ಲಿ*** ಮ್ಯಾಕಿಮ್ ಮ್ಯಾರಿಯಟ್ (ಸಂ.). *ವಿಲೇಜ್ ಇಂಡಿಯಾ.* ಶಿಕಾಗೊ ಯುನಿವರ್ಸಿಟಿ ಪ್ರೆಸ್.
- Deogaonkar, S.G. (2019). *Women's Development and Empowerment.* Ishika publishing House.
- Shanthi, K. (2009). *Women in India.* Anmol publications Pvt. Ltd.